# ಅಂಜೂರ ಹಣ್ಣಿನ ಬಜ್ಜಿ

ಏನೇನು ಬೇಕು?

ಗೋಲಾಕಾರದಲ್ಲಿ ತೆಳ್ಳಗೆ ಕಟ್ ಮಾಡಿದ ಹಣ್ಣು ಒಂದು ಕಪ್
ಕಡ್ಲೆಹಿಟ್ಟು ಅರ್ಧ ಕಪ್
ಅಕ್ಕಿಹಿಟ್ಟು ಕಾಲು ಕಪ್
ಅಚ್ಚಕಾರದ ಪುಡಿ ಎರಡು ಚಮಚ
ಗರಂ ಮಸಾಲ ಎರಡು ಚಮಚ
ಚಿಟಿಕೆ ಸೋಡಾ, ಉಪ್ಪು, ಎಣ್ಣೆ

ಮಾಡೋದು ಹೇಗೆ?

ಒಂದು ಬೌಲಿಗೆ ಕಡ್ಲೆಹಿಟ್ಟು, ಅಕ್ಕಿಹಿಟ್ಟು, ಅಚ್ಚಕಾರದಪುಡಿ, ಗರಂ ಮಸಾಲ, ಉಪ್ಪು, ಸೋಡಾ ಹಾಕಿ ದೋಸೆ ಹಿಟ್ಟಿನ ಹದಕ್ಕೆ ಕಲಸಿ. ಹೆಚ್ಚಿದ ಹಣ್ಣನ್ನು ಈ ಹಿಟ್ಟಿನಲ್ಲಿ ಅದ್ದಿ ಕಾದ ಎಣ್ಣೆಯಲ್ಲಿ ಕರಿದು ಟೀ ಜತೆ ಸೇವಿಸಿ.





# ಅಂಜೂರ ಹಣ್ಣಿನ ಸಲಾಡ್

ಏನೇನು ಬೇಕು?

ಸಣ್ಣಗೆ ಹೆಚ್ಚಿದ ಅಂಜೂರ ಹಣ್ಣು ಒಂದು ಕಪ್
ಹೆಚ್ಚಿದ ಈರುಳ್ಳಿ ಕಾಲು ಕಪ್
ನೆನೆಸಿದ ಹೆಸರುಬೇಳೆ ಕಾಲು ಕಪ್
ಹಸಿಮೆಣಸು ಎರಡು
ಶುಂಠಿ, ಉಪ್ಪು, ಲಿಂಬು, ಕೊತ್ತಂಬರಿ ಸೊಪ್ಪು

ಮಾಡೋದು ಹೇಗೆ?

ಒಂದು ಬೌಲಿಗೆ ಅಂಜೂರದ ಹಣ್ಣು, ಈರುಳ್ಳಿ, ಹೆಸರುಬೇಳೆ, ಹಸಿಮೆಣಸು, ಶುಂಠಿ, ಉಪ್ಪು, ಲಿಂಬು, ಕೊತ್ತಂಬರಿ ಸೊಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಊಟದ ಜತೆ ಸವಿಯಿರಿ.

